ಕಥೆ

ಕಾ.ತ. ಚಿಕ್ಕಣ್ಣ
ಕಲೆ: ಎಸ್.ವಿ. ಹೂಗಾರ್





# ಹುಡುಗಿ ತಿರುಗಿ ಬರಲಿಲ್ಲ

ಅದು ಹೊತ್ತು ಇಳಿಯುವ ಸಮಯ. ಮಳೆರಾಯ ಮೋಡಿ ಮಾಡಿ ಛೂಬಿಟ್ಟ ಗಾಳಿಯು ಭೋರ್ಗರೆಯುತ್ತ ಆವರಿಸಿಬಿಟ್ಟಿತ್ತು. ಮೋಡಗಳು ಕವಿದು ಕಪ್ಪನೆ ತೆರೆ ನಾಕು ದಿಕ್ಕುಗಳನ್ನೂ ಮುಸುಕಿಕೊಂಡಿತ್ತು. ಫುಟ್‌ಪಾತ್ ಬದಿಯ ಸಾಲುಮರಗಳ ರೆಂಬೆ, ಎಲೆಗರಿಗಳು ಹೂಮರಿಯ ಮೇಲೆ ಎರಗಲಿದ್ದ ಹದ್ದಿನತ್ತ ರೆಕ್ಕೆ ಬಡಿಯುತ್ತ ಪತರಗುಟ್ಟುವ ಕೋಳಿಯ ಅವತಾರದಲ್ಲಿ ರಪರಪನೆ ಬಡಿದುಕೊಳ್ಳುತ್ತಿದ್ದವು. ಶ್ರೀರಾಮೇಗೌಡರು ಮಾತ್ರ ಶಿವನಗುಡಿ ಮುಂದಾರದ ಬಸವನಂತೆ ಕಲ್ಲುಬೆಂಚಿನ ಮೇಲೆ ಕೂತಿದ್ದರು. ಅವರೊಳಗಿನ ಸುಂಟರಗಾಳಿ ಮಾತ್ರ ಸುತ್ತುತ್ತಲೇ ಇತ್ತು. ಅವರಿಗೆ ಸುತ್ತಮುತ್ತ ಚೆಲ್ಲಾಡಿದ್ದ ಎಲೆ–ಕಡ್ಡಿಗಳಾಗಲೀ, ಅಷ್ಟೆ ಯಾಕೆ ತಮ್ಮ ತಲೆ ಮೇಲೆ ಬಿದ್ದು ಕೂದಲೆಣ್ಣೆಗೆ ಅಂಟಿಕೊಂಡಿದ್ದ ಎಲೆ ಚಿಗುರಾಗಲೀ ಅವರ ಗಮನಕ್ಕೆ ಬಂದಂತಿರಲಿಲ್ಲ.

ಶ್ರೀರಾಮೇಗೌಡರು ವಾಕಿಂಗ್‌ಗಾಗಿ ಇತ್ತ ಬಂದು ಐದಾರು ದಿನಗಳಾಗಿದ್ದವು. ಹೆಂಡತಿಯ ಒತ್ತಾಯಕ್ಕಾಗಿ ಎದ್ದು ಬಂದಿದ್ದರು. ವಾಸುದೇವಯ್ಯನಿಲ್ಲದ ಈ ವಾಕಿಂಗ್ ಎದೆ ಹಿಡಿದು ಹಿಂದಕ್ಕೆ ತಳ್ಳಿದಂತಾಗುತ್ತಿತ್ತು. ಆದರೂ ಕಡು ಖಿನ್ನ ಮನಸ್ಸಿನಿಂದಲೇ ಒಂದು ಸುತ್ತು ಮುಗಿಸಿದ್ದರು. ಇಲ್ಲಿ ಒಂದು ಸುತ್ತಿಗೆ ಒಂದು ಕಿಲೊಮೀಟರ್ ಆಗುತ್ತದೆಂದು ಸ್ವತಃ ಎಂಜಿನಿಯರಾಗಿದ್ದ ವಾಸುದೇವಯ್ಯ ಲೆಕ್ಕ ಹಾಕಿದ್ದರು. ಇಬ್ಬರೂ ಕೂಡಿ ಮುಂಜಾನೆ ಮೂರು, ಸಂಜೆ ಎರಡು ರೌಂಡ್ಸ್ ವಾಕಿಂಗ್ ಮಾಡುತ್ತಿದ್ದರು. ಆ ವಾಕಿಂಗ್ ಮಾತಿಲ್ಲದೆ ಮುಗಿಯುತ್ತಿರಲಿಲ್ಲ. ಅವತ್ತಿನ ರಾಜಕೀಯ ಸುದ್ದಿ, ಲೋಕಾಯುಕ್ತರು ಜಪ್ತಿ ಮಾಡಿದ ಏಳೆಂಟು ಅಧಿಕಾರಿಗಳ ಲೆಕ್ಕವಿಲ್ಲದ ಆಸ್ತಿಪಾಸ್ತಿ